## ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ

O.S. ನಂ. 360/17

| | | |
|---|---|---|
| ಸಾಕ್ಷಿಯ ಹೆಸರು | ತಾಂಡವಮೂರ್ತಿ | P.W.2. |
| ತಂದೆಯ ಹೆಸರು | ಎಸ್.ಕೆ. ಬೊಮ್ಮರಾಜ್ | |
| ವಯಸ್ಸು | 33 ವರ್ಷ | |
| ಉದ್ಯೋಗ | ಸರ್ವೆಯರ್ | ದಿನಾಂಕಃ 07-09-2022 |
| ವಾಸ | ಸಾಲಿಗ್ರಾಮ . | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಶ್ರೀ. ಕೆ.ಎನ್.ವಕೀಲರಿಂದ .

2014 ರಿಂದ ಆಲೂರಿನಲ್ಲಿ ಸರ್ವೆಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ವಾದಿಯರು ಹೇಳಿದ ಅರ್ಜಿ ಆಧಾರದ ಮೇಲೆ ಅಡಿಬೈಲು ಗ್ರಾಮದ ಸ.ನಂ. 44/1 ರಲ್ಲಿ ಸ್ಥಳವನ್ನು ಅಳತೆ ಮಾಡಿರುತ್ತೇನೆ. ದಾವಾ ಸ್ವತ್ತಿಗೆ ಹೋಗುವ ಮೊದಲು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸು ನೀಡಿರುತ್ತೇನೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿನ ಕಡೆ ಸ.ನಂ. 45 ರ ಸ್ವತ್ತು ಇದ್ದು, ಅದರ ಮಾಲೀಕರು ದಾವಾ ಸ್ವತ್ತಿನ 18 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಸ್ಥಳದಲ್ಲಿ ಅಳತೆ ಮಾಡಿ ನಕ್ಷೆ ತಯಾರಿಸಿ , ಮಹಜರು ಕ್ರಮ ಕೈಗೊಂಡಿರುತ್ತೇನೆ. ನಕ್ಷೆ ತಯಾರಿಸಿ ನಕ್ಷೆಗೆ ಹಾಗೂ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನೋಟೀಸು, ಮಹಜರ್ ಹಾಗೂ ನಕ್ಷೆಯ ಪ್ರತಿಗಳನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದೆಂದು ಸದರಿ ನೋಟೀಸನ್ನು ನಾನು ಪಕ್ಷಗಾರರಿಗೆ ನೀಡಿದ್ದು , ಅವರ ಸಮಕ್ಷಮ ಮಹಜರ್ ಮಾಡಿ ನಕ್ಷೆ ತಯಾರಿಸಿರುತ್ತೇನೆಂದು ಒಪ್ಪಿಕೊಂಡ ಮೇರೆಗೆ ಆ ದಾಖಲೆಗಳನ್ನು ನಿಪಿ-4 ರಿಂದ 6 ಎಂದು ಗುರುತಿಸ ಲಾಯಿತು.

1 ನೇ ಪ್ರತಿವಾದಿ ಗೈರುಹಾಜರಾಗಿದ್ದು , ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು